Sri A. P. APPANNA.—There are various shipments and the total quantity is 4,03,451 tonnes. But all these have to be sold through M.M.T.C. at a uniform rate.

ಶ್ರೀ ಎ. ಕೆ. ಸುಬ್ಬಯ್ಯ.—ಮಾರಾಟವಾಗದಿರುವ ಅದಿರು ಎಷ್ಟು ಸಮಯದಿಂದ ಉಳಿದಿದೆ ?

ಶ್ರೀ ಎ. ಪಿ. ಅಪ್ಪಣ್ಣ.—ಸುಮಾರು ಒಂದೂವರೆ ವರ್ಷದಿಂದ ಮಾರಾಟವಾಗದೆ ಉಳಿದಿದೆ.

ಶ್ರೀ ಕೆ. ಚೆನ್ನಬಸಪ್ಪನಗೌಡ.—ಆ ರೀತಿ ಮಾರಾಟವಾಗದಿರುವುದಕ್ಕೆ ಏನು ಕಾರಣ, ಅದಕ್ಕೆ ಯಾರು ಕಾರಣ ಎಂಬುದನ್ನು ತಿಳಿದುಕೊಂಡು ಸಂಬಂಧಪಟ್ಟವರಮೇಲೆ ಕ್ರಮ ತೆಗೆದು ಕೊಂಡಿದ್ದೀರಾ ?

Sri A. P. APPANNA.—The Government has authorised the then Divisional Commissioner of Bangalore, now the Chief Secretary to Government, to investigate this matter and submit a report to the Government.

Refusal to Forward Pension Papers of a Retired High School Headmaster in South Kanara District

130. Sri S. MUKUNDA RAO (Teachers' Constituency).—

Will the Minister for Education be pleased to state :—

(*a*) whether it has come to the notice of Government that the Executive Officer of Taluk Development Board, Karkal, South Kanara has refused to forward the pension papers of a retired High School Headmaster stating that T.B.S. Rules are not applicable to T.D.B. High Schools ;

(*b*) whether the Education Department had made it clear to that Board that so long as aid was being received by the T.D.B. High Schools they should follow the T.B.S. Rules also ;

(*c*) the action taken by Government to get the Teachers' pension sanctioned and also action against the Executive Officer for refusing to forward pension papers ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) No.

(*c*) The matter is under consideration of Government.

ಶ್ರೀ ಎಸ್. ಮುಕುಂದರಾವ್.—(ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಒಂದು ವರ್ಷದ ಹಿಂದೆ ಮಾನ್ಯ ವಿದ್ಯಾ ಮಂತ್ರಿಗಳು ಇದೇ ಪ್ರಶ್ನೆ ಬಂದಾಗ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಪ್ರೌಢಶಾಲೆಯವರು ಸಹಾಯ ಧನವನ್ನು ಪಡೆಯುವವರೆಗೂ ತ್ರಿರಾನ ಯೋಜನೆಯ ನಿಯಮಗಳನ್ನು ಪಾಲಿಸಬೇಕೆಂದು ಹೇಳಿದ್ದು ನಿಜವೇ ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಬಗ್ಗೆ ವಿದ್ಯಾ ಖಾತೆಯ ಅಭಿಪ್ರಾಯ ಸ್ಪಷ್ಟವಾಗಿದೆ. ಆದರೆ ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ಈ ಬಗ್ಗೆ ಒಪ್ಪಿಕೊಂಡಿಲ್ಲವಾದ್ದ

ರಿಂದ ವಿದ್ಯಾಖಾತೆಯವರು ಡಿ.ಎಚ್.ಪಿ.ಸಿ. ಅವರ ಮತ್ತು ಲಾ – ಇಲಾಖೆಯವರ ಅಭಿಪ್ರಾಯ ಕೇಳಿದ್ದಾರೆ. ಅವರ ಅಭಿಪ್ರಾಯ ತಿಳಿದನಂತರ ಮುಂದಿನ ಕ್ರಮ ಕೈಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಮುಕುಂದರಾವ್.—ಪ್ರೌಢಶಾಲೆಯ ಮುಖ್ಯೋಪಾಧ್ಯಾಯರೊಬ್ಬರು ರಿಟೈರ್ ಆಗಿ ಕೆಲವು ತಿಂಗಳಾಯಿತು. ಅವರ ವಿಶ್ರಾಂತಿ ವೇತನ ಇನ್ನೂ ನಿಶ್ಚಯವಾಗಿಲ್ಲ. ಆದ್ದರಿಂದ ಆದಷ್ಟು ಬೇಗ ಅವರ ವಿಶ್ರಾಂತಿ ವೇತನವನ್ನು ನಿಶ್ಚಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಕೇಸ್ ಸರ್ಕಾರದಿಂದ ತಡವಾಗಿಲ್ಲ ಮತ್ತು ಸರ್ಕಾರದವರು ಮಾಡುವುದಕ್ಕಾಗುವುದಿಲ್ಲ. ತಾಲ್ಲೂಕ್ ಬೋರ್ಡಿನವರು ತೀವ್ರವಾದ ಕ್ರಮ ಕೈಕೊಳ್ಳದಿರುವುದರಿಂದ ನಿಧಾನವಾಗಿದೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—(ಇ) ಪ್ರಶ್ನೆಗೆ ಉತ್ತರವಾಗಿ 'ಈ ವಿಷಯವು ಸರ್ಕಾರದವರ ಪರಿಶೀಲನೆಯಲ್ಲಿದೆ' ಎಂದು ಹೇಳಿದ್ದೀರಿ. ಅಂದರೆ ನಿರ್ವಹಣಾಧಿಕಾರಿಯವರದ್ದು ತಪ್ಪಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದೀರಿ. ಈ ಬಗ್ಗೆ ಅವರ ಮೇಲೆ ಎಕ್ಸ್‌ಪ್ಲನೇಷನ್ ಕಾಲ್‌ಫಾರ್ ಮಾಡಿದ್ದೀರಾ ಅಥವಾ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಲ್ಲಿ ನಿರ್ವಹಣಾಧಿಕಾರಿಯವರದ್ದು ಏನೂ ತಪ್ಪಿಲ್ಲ. ಮುಖ್ಯೋಪಾಧ್ಯಾಯರ ವಿಶ್ರಾಂತಿ ವೇತನಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಕಳುಹಿಸಿದಂತೆ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು ನಿರ್ಣಯ ತೆಗೆದುಕೊಂಡಿದ್ದಾರೆ. ಮತ್ತು ಸರ್ಕಾರದ ನಿಯಮಾವಳಿಯನ್ನೇ ಪ್ರಶ್ನಿಸಿದ್ದಾರೆ. ಇದು ಮೂಲಭೂತವಾದ ಪ್ರಶ್ನೆಯಾದ್ದರಿಂದ ಕಾನೂನು ಇಲಾಖೆಯ ಸಲಹೆಯನ್ನು ಕೇಳಿದ್ದೇವೆ. ಅವರ ಸಲಹೆ ಬಂದನಂತರ ತೀವ್ರವಾದ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಸ್. ಮುಕುಂದರಾವ್.—ವಿದ್ಯಾ ಇಲಾಖೆಯ ಅಭಿಪ್ರಾಯವಲ್ಲಿ ಈ ನಿಯಮಗಳು ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ನಡೆಸುತ್ತಿರುವ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಅನ್ವಯಿಸುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ವಿದ್ಯಾ ಇಲಾಖೆಯ ನಿಯಮಾವಳಿಯ ಪ್ರಕಾರ ಧನ ಪಡೆಯುವಂತಹ ಎಲ್ಲಾ ಸಂಸ್ಥೆಗಳೂ ಸಹ ಅನುಸರಿಸಬೇಕೆಂದು ಇವೆ. ಆದರೆ ಈ ಕಾರ್ಯಕ್ಕೆ ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ತಮ್ಮ ರೂಲ್ಸ್‌ನಲ್ಲಿ ಈ ಬಗ್ಗೆ ಪ್ರಾವಿಜನ್ ಇಲ್ಲ ಎಂದು ಪ್ರಶ್ನೆ ಮಾಡಿರುವುದರಿಂದ ನಾವು ಕಾನೂನು ಇಲಾಖೆಯ ಮತ್ತು ಡಿ.ಎಚ್.ಪಿ.ಸಿ.ಯ ಒಪ್ಪಿಗೆ ಪಡೆಯಬೇಕಾಗಿದೆ.

Construction of New Building for the Mysore High Court

178. Sri K. SURYANARAYANA ADIGA (Local Authorities' Constituency).—

Will the Minister for Law, Labour and Parliamentary Affairs be pleased to state :—

(*a*) whether any representation has been made to the Government for constructing a new and elegant building for the Mysore High Court ;

(*b*) whether it has come to the notice of the Government that the Bangalore Advocates Association represented in July 1969 to the Union Home Minister, requesting for a new building for the High Court ;